ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದ ತಾಲ್ಲೂಕು ಹುಣಸೆಕೊಪ್ಪದ ಗ್ರಾಮದಲ್ಲಿ ಸರ್ಕಾರಿ ಜಾಗವಲ್ಲಿರುವ ಬಂಧು ಹುಣಸೆಮರದ ಬುಡದಲ್ಲಿ ಈ ಕೆಳಗೆ ನಮೂದಾಗಿರುವ ಸುಮಾರು 909 ರೂಪಾಯಿ 8 ಆಣೆ ಬೆಲೆ ಉಳ್ಳ ನಿಧಿಯು ತಾರೀಖು 16-9-06ರಲ್ಲಿ ಸಿಕ್ಕಿತು :—

ಸಿಕ್ಕಿದ ವಸ್ತುವೆ.	ಅಂದಾಜಾ ಬೆಲೆ. ರೂ. ಆ. ಪೈ.
38 ಚಿನ್ನದ ನಾಣ್ಯಗಳು ...	388 0 0
ಒಂದು ಭಂಗಾರದ ಸರಿಗೆ ...	105 0 0
ಒಂದು ಜೊತೆ ಬೆಳ್ಳಿ ಬಳೆ ...	48 0 0
ಎರಡು ಭಂಗಾರದ ಹೊನ್ನೂವು ...	12 0 0
ಡಿಟೋ ಡಿಟೋ ...	9 0 0
ಒಂದು ಚಿನ್ನದ ಕಠಡಿಗೆ ...	264 0 0
ಒಂದು ಡಿಟೋವಿನ ಭಂಗಾರದ ಪೆಟ್ಟಿಗೆ ...	10 0 0
ಒಂದು ಭಂಗಾರದ ಕಾವಂತಿಗೆ ಹುವ್ವು ...	60 0 0
ಒಂದು ಜೊತೆ ಕಾಕಿತಾಲಿಗುಂಡು ...	6 0 0
ಒಂದು ಜೊತೆ ಭಂಗಾರದ ಚಳತುಂಬು ...	9 0 0
ಒಂದು ಜೊತೆ ಭಂಗಾರದ ಕಪ್ಪ ...	15 0 0
ಒಂದು ಭಂಗಾರದ ಚಾಕ ...	16 0 0
ಒಂದು ಭಂಗಾರದ ವಾಲೆಕಲಕ ...	16 0 0
ಒಂದು ಭಂಗಾರದ ಖುಗುಡಿ ಕಲಕ ...	1 8 0
	909 8 0

2. ಸದರಿ ವಿಸಿಪ್ಪ ನಿಧಿಗೇ ಆಗಲಿ ಅಥವಾ ಅದರ ಒಂದು ಭಾಗಕ್ಕಾಗಲಿ ಹಕ್ಕುದಾರರೆಲ್ಲರು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಖುದ್ದಾಗಿಯಾಗಲಿ, ವಿಜಂಟರ ಮುಖಾಲಕವಾಗಿಯಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ಟರವರ ಆಫೀಸಿನಲ್ಲಿ 1907ನೆ ಇಸವಿ ಆಗಸ್ಟು 3ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 31ನೆ ಜನವರಿ 1907.

ತರೀಕೆರೆ ತಾಲ್ಲೂಕು ಕೆಳಗಿನ ಶಿವಬೈಲ್ ಎಸ್ಟೇಟು ವಿ|| ಡೇವಿಡ್ ಹಿನ್ರಿ ಕೋರ್ಪಲೆಸ್ ಸಾಹೇಬರವರಿಂದ ತಿಗಡೆ ಗ್ರಾಮಕ್ಕೆ ಬರಬೇಕಾದ ಕಂದಾಯದ ಬಾಕ್ಕೀಗಾಗಿ ಇವರ ಸ್ಥಿರಸ್ವತ್ತನ್ನು ಕಡೂರು ಡಿಸ್ಟ್ರಿಕ್ಟು ತರೀಕರೆ ತಾಲ್ಲೂಕು ನಂದಿಬಟ್ಟು ಗ್ರಾಮದಲ್ಲಿ ಸನ್ 1907ನೆ ಇಸವಿ ಮಾರ್ಚಿ ತಾರೀಖು 11ನೆ ಸೋಮವಾರದ ದಿವಸ ತಾಲ್ಲೂಕು ಅಮಲ್ದಾರ್‌ರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂತ ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚಿನ ತಪಸೀಲುಗಳಿಗೆ 1907ನೆ ಇಸವಿ ಫೆಬ್ರವರಿ 7ನೆ ತಾರೀಖು 6ನೆ ಸಂಖ್ಯೆಯ ಮೈಸೂರು ಗೆಜೆಟ್ಟಿನ IIನೆ ಭಾಗದ 45ನೆ ನಂಬರ್ ಪೇಜು ನೋಡಬೇಕು.

ಎಂ. ಲಕ್ಷ್ಮಣಾಸ್ತ್ರಿ,
ಫಾರ್ ಡೆಪ್ಯುಟಿ ಕಮಿಷನರ್.